# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ:+91-80-2226 0017;+91-80-2226 7470;+91-80-2226 1047 ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.org


ಸಂಖ್ಯೆ:SHQ/Special Summer Camp/143/2025-26 1020 ದಿನಾಂಕ:01.04.2026

ಎಲ್ಲಾ ಜಿಲ್ಲಾ ಕಾರ್ಯದರ್ಶಿಗಳಿಗೆ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಜಿಲ್ಲಾ ಸಂಸ್ಥೆ, ಕರ್ನಾಟಕ

ಮಾನ್ಯರೆ,

**ವಿಷಯ: ವಿಶೇಷ ಬೇಸಿಗೆ ಶಿಬಿರದ ಅಡಿಯಲ್ಲಿ ರಾಜ್ಯ ಮಟ್ಟದ ಪ್ರಕೃತಿ ಅಧ್ಯಯನ & ಚಾರಣ, ಶಿಬಿರಕ್ಕೆ ಹಿರಿಯ ಸ್ಕೌಟ್ಸ್-ಗೈಡ್ಸ್ & ರೋವರ್ಸ್-ರೇಂಜರ್ಸ್‌ಗಳನ್ನು ನಿಯೋಜಿಸುವ ಬಗ್ಗೆ**

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸಹಯೋಗದೊಂದಿಗೆ ಹಿರಿಯ ಸ್ಕೌಟ್ಸ್-ಗೈಡ್ಸ್ & ರೋವರ್ಸ್-ರೇಂಜರ್ಸ್‌ಗಳನ್ನು ವಿಶೇಷ ಬೇಸಿಗೆ ಶಿಬಿರದ ಅಡಿಯಲ್ಲಿ ರಾಜ್ಯ ಮಟ್ಟದ ಪ್ರಕೃತಿ ಅಧ್ಯಯನ ಮತ್ತು ಚಾರಣ ಶಿಬಿರವನ್ನು **ದಿನಾಂಕ 16.05.2026 ರಿಂದ 20.05.2026ರ ವರೆಗೆ** ಕುಮಾರಸ್ವಾಮಿ ವಿದ್ಯಾಲಯ, ಸುಬ್ರಮಣ್ಯ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಯೋಜಿಸಲಾಗಿದೆ. ವಿವರಗಳು ಕೆಳಕಂಡಂತಿವೆ.

| | |
|---|---|
| ಶಿಬಿರ | ಹಿರಿಯ ಸ್ಕೌಟ್ಸ್-ಗೈಡ್ಸ್ & ರೋವರ್ಸ್-ರೇಂಜರ್ಸ್‌ಗಳನ್ನು ವಿಶೇಷ ಬೇಸಿಗೆ ಶಿಬಿರದ ಅಡಿಯಲ್ಲಿ ರಾಜ್ಯ ಮಟ್ಟದ ಪ್ರಕೃತಿ ಅಧ್ಯಯನ ಮತ್ತು ಚಾರಣ ಶಿಬಿರ |
| ದಿನಾಂಕ | ದಿನಾಂಕ:16.05.2026 ರಿಂದ 20.05.2026ರ ವರೆಗೆ |
| ವರದಿ ಮಾಡುವ ಸ್ಥಳ | ಕುಮಾರಸ್ವಾಮಿ ವಿದ್ಯಾಲಯ, ಸುಬ್ರಮಣ್ಯ, ದಕ್ಷಿಣ ಕನ್ನಡ ಜಿಲ್ಲೆ |
| ಹಾಜರಾಗುವ ವೇಳೆ ಮತ್ತು ದಿನಾಂಕ | ದಿನಾಂಕ: 16.05.2026 ರಂದು ಬೆಳಗ್ಗೆ 9.00 ಗಂಟೆಗೆ ಕಡ್ಡಾಯವಾಗಿ ವರದಿ ಸಲ್ಲಿಸುವುದು. (ಶಿಬಿರಕ್ಕೆ ತಡವಾಗಿ ಬರುವಂತಿಲ್ಲ.) |
| ಬಿಡುಗಡೆ ಮಾಡುವ ದಿನಾಂಕ | ದಿನಾಂಕ 20.05.2026 ಮಧ್ಯಾಹ್ನ ಊಟದ ನಂತರ ಬಿಡುಗಡೆ |
| ನೊಂದಣಿ & ಶಿಬಿರ ಶುಲ್ಕ | ತಲಾ ರೂ.600/- |
| ಆನ್‌ಲೈನ್ ನೊಂದಾವಣಿ | ಭಾಗವಹಿಸುವ ಹಿರಿಯ ಸ್ಕೌಟ್ಸ್-ಗೈಡ್ಸ್ ರೋವರ್ಸ್-ರೇಂಜರ್ಸ್‌ಗಳು ಈ ಲಿಂಕ್ https://zfrmz.in/tXeTqbC6m1wY9yYh9vBjನಲ್ಲಿ ನೊಂದಾವಣಿ ಮಾಡಿಕೊಳ್ಳುವುದು. |
| ತರಬೇಕಾದ ಸಾಮಾಗ್ರಿಗಳು | ಶಿಬಿರಕ್ಕೆ ಅವಶ್ಯಕವಿರುವ ಉಡುಪು ಮತ್ತು ಸಲಕರಣೆಗಳು. ಸಮವಸ್ತ್ರ, ಬದಲಿ ಉಡುಪು, ತಟ್ಟೆ, ಲೋಟೆ, ಹಗುರ ಹಾಗೂ ಬೆಚ್ಚನೆ ಹಾಸಿಗೆ, ನೂಲಿನ ಹಗ್ಗ, ಬರವಣೆಗೆ ಸಾಮಾಗ್ರಿಗಳು, ವೈಯಕ್ತಿಕ ವಸ್ತುಗಳು, ನೋಟ್ ಪುಸ್ತಕ, ಶಿಬಿರಾಗ್ನಿ ಉಡುಪು, ದೈಹಿಕ ವೈದ್ಯಕೀಯ ಪ್ರಮಾಣ ಪತ್ರ |
| ಪ್ರತಿ ಜಿಲ್ಲೆಗೆ ನಿಗಧಿಪಡಿಸಿರುವ ಕೋಟಾ | ಪ್ರತಿ ಜಿಲ್ಲೆಯಿಂದ ನಿಪುಣ್ ತರಬೇತಿ ಹೊಂದಿದ 5 ರೋವರ್ಸ್/ರೇಂಜರ್ಸ್/ದಳನಾಯಕರು/ಹಿರಿಯ ಸ್ಕೌಟ್-ಗೈಡ್‌ಗಳನ್ನು ಸಹ ನಿಯೋಜಿಸುವುದು. |
| ಶಿಬಿರದ ವಿಶೇಷತೆಗಳು | ಸಿ.ಪಿ.ಸಿ.ಐ ನೆಟ್ಟಕಣಕ್ಕೆ ಭೇಟಿ, ವಿವಿಧ ಬಗೆಯ ತೆಂಗಿನ ಕೃಷಿ ಬಗ್ಗೆ ಮಾಹಿತಿ, ಬಿಚ್ಚನ ನಾಯಕ ಗುಂಡಿಯ ಇತಿಹಾಸ ತಿಳುವಳಿಗೆ, 400 ವರ್ಷಗಳ ಹಿಂದಿನ ಶಿಲಾಮಯ ದೇವಸ್ಥಾನದ ಪರಿಚಯ, ಮಾಯ್ವಲ್ ಕೋಟೆ ಪಂಜ ಭೇಟಿ ಇತ್ಯಾದಿ ವಿಷಯಗಳ ಬಗ್ಗೆ ಮಾಹಿತಿಗಳನ್ನು ತಿಳಿಸಲಾಗುವುದು. |

| | |
|---|---|
| ಪ್ರಯಾಣ ವೆಚ್ಚ | ಆಯಾಯ ಶಾಲಾ/ಕಾಲೇಜಿನ ಸ್ಕೌಟ್-ಗೈಡ್/ರೋವರ್-ರೇಂಜರ್ ನಿಧಿಯಿಂದ ಭರಿಸುವುದು |
| ಊಟ ಮತ್ತು ವಸತಿ ವ್ಯವಸ್ಥೆ | ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯವರು ವ್ಯವಸ್ಥೆ ಮಾಡಿರುತ್ತಾರೆ |
| ಸಂಪರ್ಕಿಸಬೇಕಾದ ಸಂಖ್ಯೆ | ಶ್ರೀ. ಉದಯಕುಮಾರ್, ಸ್ಥಳೀಯ ಕಾರ್ಯದರ್ಶಿ, –<br>ಶ್ರೀ. ಭರತ್ ರಾಜ್, ಎಎಸ್‌ಒಸಿ, ದಕ್ಷಿಣ ಕನ್ನಡ – 8073895340<br>ಶ್ರೀ ಎಂ. ಪ್ರಭಾಕರ್ ಭಟ್, ಎಸ್.ಒ.ಸಿ – 9448914540<br>ಶ್ರೀಮತಿ ಮಂಜುಳ. ಸಿ, ಎಸ್.ಒ.ಸಿ – 9482433516 |

ಭಾಗವಹಿಸುವ ರೋವರ್ಸ್-ರೋವರ್ಸ್/ಸ್ಕೌಟ್ಸ್-ಗೈಡ್ಸ್‌ಗಳ ಶಿಬಿರ ಶುಲ್ಕ ಮತ್ತು ಪ್ರಯಾಣ ಭತ್ಯೆಯನ್ನು ಆಯಾಯ ಕಾಲೇಜಿನ ರೋವರ್ಸ್-ರೇಂಜರ್ಸ್/ಶಾಲಾ ಸ್ಕೌಟ್-ಗೈಡ್ ನಿಧಿಯಿಂದ ಭರಿಸುವುದು. ಆಸಕ್ತ ರೋವರ್ಸ್-ರೇಂಜರ್ಸ್/ಹಿರಿಯ ಸ್ಕೌಟ್ಸ್-ಗೈಡ್ಸ್‌ಗಳನ್ನು ಆಯ್ಕೆ ಮಾಡಿ, ಮೇಲ್ಕಂಡ ಶಿಬಿರಕ್ಕೆ ನಿಯೋಜಿಸಲು ಕೋರಲಾಗಿದೆ. ಭಾಗವಹಿಸುವ ರೋವರ್ಸ್-ರೇಂಜರ್ಸ್‌ಗಳ ವಿವರಗಳನ್ನು ದಿನಾಂಕ: 10.05.2026ರ ಒಳಗಾಗಿ ರಾಜ್ಯ ಸಂಸ್ಥೆಗೆ ತಪ್ಪದೇ ಕಳುಹಿಸುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ.ಗಂಗಪ್ಪ ಗೌಡ)
ರಾಜ್ಯ ಕಾರ್ಯದರ್ಶಿ

**ಪ್ರತಿ ಮಾಹಿತಿಗಾಗಿ:**

1. ಜಿಲ್ಲಾ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ದಕ್ಷಿಣ ಕನ್ನಡ ಜಿಲ್ಲೆ
2. ಎ.ಎಸ್.ಒ.ಸಿ/ಡಿಒ/ಡಿಒಸಿ/ಡಿಒಟಿ/ಎಸ್‌ಜಿವಿ/ಎಸ್‌ಜಿಎಗಳು, ಭಾ.ಸ್ಕೌ&ಗೈ, ಇವರುಗಳ ಸೂಕ್ತ ಕ್ರಮಕ್ಕಾಗಿ